**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक-संस्कृत-विश्वविद्यालयः**
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

ಸಂಖ್ಯೆ: ಕಸಂವಿ/ಪ್ರ.ಸ./2017–18 | 438-25        ದಿನಾಂಕ: 22.12.2017

ಮಾನ್ಯರೇ,

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ ನಲವತ್ತೊಂದನೆಯ** ಸಭೆಯು ದಿನಾಂಕ: **22.12.2017**ರ **ಶುಕ್ರವಾರ ಪೂರ್ವಾಹ್ನ 11.00 ಗಂಟೆಗೆ** ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಕುಲಪತಿಗಳು ವಹಿಸಿದ್ದರು. ಈ ಪತ್ರದೊಂದಿಗೆ ಆ ದಿನ ನಡೆದ ಸಭೆಯ ನಡಾವಳಿಯನ್ನು ತಮ್ಮ ಅವಗಾಹನೆಗೆ ಕಳುಹಿಸಿಕೊಡಲಾಗಿದೆ.

ಈ ಸಭೆಯ ನಡಾವಳಿಗಳಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪತ್ರ ತಲುಪಿದ ದಿನಾಂಕದಿಂದ ಹತ್ತು ದಿನಗಳೊಳಗಾಗಿ ಸಲ್ಲಿಸಲು ಕೋರಲಾಗಿದೆ.

ವಂದನೆಗಳೊಂದಿಗೆ,

Shulpay
**ಕುಲಸಚಿವರು**

ಇವರಿಗೆ,

1. **ಶ್ರೀಮತಿ ಸುಜಾತ ಗೌಡ,** # 30, 7ನೇ ಹಂತ, 2ನೇ ಮುಖ್ಯರಸ್ತೆ, ಬಿ.ಇ.ಎಂ.ಎಲ್. ಲೇಔಟ್, ಮೈಲಸಂದ್ರ, ಕೆಂಗೇರಿ, ಬೆಂಗಳೂರು – 560059.
2. **ಶ್ರೀ ಶಿವಕುಮಾರ್ ಎನ್.,** # 109, 2ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, ಪಾಂಡುರಂಗ ಬಡಾವಣೆ, ಅರಕೆರೆ ಗೇಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560076.
3. **ಶ್ರೀ ಪರಪ್ಪ ಬಸಪ್ಪ ಬಾವಲತ್ತಿ,** ರಾಮಪುರ, ರಬಕವಿ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.
4. **ಪ್ರೊ. ಮೈಕೆಲ್,** ಸಂಸ್ಕೃತ ಪ್ರಾಧ್ಯಾಪಕರು, ಗುಲ್ಬರ್ಗಾ ವಿಶ್ವವಿದ್ಯಾಲಯ, ಜ್ಞಾನಗಂಗಾ, ಕಲಬುರಗಿ–585106.
5. **ಶ್ರೀಮತಿ ಜಯಶ್ರೀ ವಿ. ಕೊರತಿ,** ಕೆನರಾ ವೆಲ್‌ಫೇರ್ ಟ್ರಸ್ಟ್ ಎಜುಕೇಷನ್ ಕಾಲೇಜು, ದಾಂಡೇಲಿ, ಉತ್ತರ ಕನ್ನಡ ಜಿಲ್ಲೆ – 581325
6. **ವಿದ್ವಾನ್ ಎಂ. ಸಿದ್ಧಮಲ್ಲ ಸ್ವಾಮಿ,** ನಂ. 136/1, ಶ್ರೀ ನೀಲಕಂಠಸ್ವಾಮಿ ಮಠ, ಹರಿಶ್ಚಂದ್ರ ರಸ್ತೆ, ಖಿಲ್ಲೆ ಮೊಹಲ್ಲಾ, ಮೈಸೂರು–570009.
7. **ಶ್ರೀ ಗಜಾನನ ಲಕ್ಷ್ಮೀನಾರಾಯಣ ಭಟ್ಟ,** ಉಮ್ಮಚಗಿ, ಯಲ್ಲಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ – 581347
8. **ಡಾ. ಕೆ. ಸುಧಾಕರ್,** ನಂ. 346/347, 'ಪ್ರೇಮವಿಲ್ಲಾ', 14ನೇ ಮುಖ್ಯರಸ್ತೆ, ಆರ್.ಎಂ.ವಿ. ಬಡಾವಣೆ, ಸದಾಶಿವನಗರ, ಬೆಂಗಳೂರು–80.
9. **ಕ್ಯಾಪ್ಟನ್ ಗಣೇಶ್ ಕಾರ್ಣಿಕ್,** ರೂಮ್ ನಂ. 145, 1ನೇ ಮಹಡಿ, ವಿಧಾನಸೌಧ, ಬೆಂಗಳೂರು–560001.
10. **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ (ವಿಶ್ವವಿದ್ಯಾಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು–560001
11. **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ವಿಧಾನಸೌಧ, ಬೆಂಗಳೂರು–560001
12. **ಸರ್ಕಾರದ ಕಾರ್ಯದರ್ಶಿ,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ) ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು–560001
13. **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈಋತ್ಯ ಪ್ರಾದೇಶಿಕ ಕೇಂದ್ರ, ಪ್ರಸನ್ನಕುಮಾರ್ ಬ್ಲಾಕ್, ಅರಮನೆ ರಸ್ತೆ, ಬೆಂಗಳೂರು–09,
14. **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು–570001.
15. **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560002.
16. **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–560001
17. **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ ಬೆಂಗಳೂರು–560001
18. **ನಿರ್ದೇಶಕರು,** ಪದವಿಪೂರ್ವ ಶಿಕ್ಷಣ ಇಲಾಖೆ, 18 ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560012
19. **ನಿರ್ದೇಶಕರು,** ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು–560009
20. **ಆಯುಕ್ತರು,** ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001

**ಪ್ರತಿಗಳು:**

1. **ಘನತೆವೆತ್ತ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು,** ರಾಜಭವನ, ಬೆಂಗಳೂರು – 560001
2. **ಮಾನ್ಯ ಕುಲಪತಿಯವರ ಆಪ್ತಶಾಖೆ,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
3. ಕಛೇರಿ ಪ್ರತಿ
4. ರಕ್ಷತಾ ಪ್ರತಿ
5. ಜಾಲತಾಣಕ್ಕೆ ಅಳವಡಿಸಲು – ತುರ್ತು

ದೂರವಾಣಿ: 080 – 26701303 / 26705387; ಇ–ಮೇಲ್: karnatakasanskrituniversity@gmail.com
दूरवाणी: ०८०–२६७०१३०३; २६७०५३८७; ई–सङ्केतः – karnatakasanskrituniversity@gmail.com

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक-संस्कृत-विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

## 22.12.2017ರಂದು ನಡೆದ ಪ್ರಶಾಸನ ಸಮಿತಿ (ಸಿಂಡಿಕೇಟ್) 41ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ 41ನೇ ಸಭೆಯು** ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ಡಿಸೆಂಬರ್ 22, 2017ರ ಶುಕ್ರವಾರ ಪೂರ್ವಾಹ್ನ 11.00** ಗಂಟೆಗೆ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

ಹಾಜರಿದ್ದವರು:

| | |
|---|---|
| ೧. **ಪ್ರೊ. ಪದ್ಮಾಶೇಖರ್**, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. **ಶ್ರೀಮತಿ ಸುಜಾತ ಗೌಡ**, ಬೆಂಗಳೂರು | ಸದಸ್ಯರು |
| ೩. **ಶ್ರೀ ಶಿವಕುಮಾರ್ ಎನ್.**, ಬೆಂಗಳೂರು | ಸದಸ್ಯರು |
| ೪. **ಶ್ರೀ ಪರಪ್ಪ ಬಸಪ್ಪ ಬಾವಲತ್ತಿ**, ನಿವೃತ್ತ ಅಧ್ಯಾಪಕರು, ರಾಮಪುರ, ರಬಕವಿ | ಸದಸ್ಯರು |
| ೫. **ಡಾ. ಮೈಕೆಲ್**, ಪ್ರಾಧ್ಯಾಪಕರು ಮತ್ತು ಡೀನ್, ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ | ಸದಸ್ಯರು |
| ೬. **ಶ್ರೀಮತಿ ಜಯಶ್ರೀ ವಿ. ಕೊರತಿ**, ಪ್ರಾಚಾರ್ಯರು, ದಾಂಡೇಲಿ | ಸದಸ್ಯರು |
| ೭. **ವಿದ್ವಾನ್ ಸಿದ್ಧಮಲ್ಲ ಸ್ವಾಮಿ**, ನಿವೃತ್ತ ಪ್ರಾಧ್ಯಾಪಕರು, ಮೈಸೂರು | ಸದಸ್ಯರು |
| ೮. **ವಿದ್ವಾನ್ ಗಜಾನನ ಲಕ್ಷ್ಮೀನಾರಾಯಣ ಭಟ್ಟ**, ನಿವೃತ್ತ ಪ್ರಾಚಾರ್ಯರು, ಉಮ್ಮಚಗಿ | ಸದಸ್ಯರು |
| ೯. **ಶ್ರೀಮತಿ ಎಂ. ಶಿಲ್ಪ**, ಕುಲಸಚಿವರು | ಸದಸ್ಯ ಕಾರ್ಯದರ್ಶಿ |

ಗೈರುಹಾಜರಿ:

| | |
|---|---|
| ೧. **ಡಾ. ಕೆ. ಸುಧಾಕರ್**, ಶಾಸಕರು(ಚಿಕ್ಕಬಳ್ಳಾಪುರ), ಬೆಂಗಳೂರು | ಸದಸ್ಯರು |
| ೨. **ಕ್ಯಾಪ್ಟನ್ ಗಣೇಶ್ ಕಾರ್ಣಿಕ್**, ಮಾನ್ಯ ವಿಧಾನಪರಿಷತ್ ಸದಸ್ಯರು, ಬೆಂಗಳೂರು | ಸದಸ್ಯರು |
| ೩. **ಪ್ರಧಾನ ಕಾರ್ಯದರ್ಶಿಗಳು**, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೪. **ಅಪರ ಮುಖ್ಯ ಕಾರ್ಯದರ್ಶಿಗಳು**, ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೫. **ಕಾರ್ಯದರ್ಶಿಗಳು**, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೬. **ಪ್ರಾದೇಶಿಕ ನಿರ್ದೇಶಕರು**, ಯುಜಿಸಿ-ನೈಋತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು-09 | ಸದಸ್ಯರು |
| ೭. **ನಿರ್ದೇಶಕರು**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೮. **ಆಯುಕ್ತರು**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೯. **ಆಯುಕ್ತರು**, ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು-560001 | ಸದಸ್ಯರು |
| ೧೦.**ನಿರ್ದೇಶಕರು**, ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಬೆಂಗಳೂರು-560001 | ಸದಸ್ಯರು |
| ೧೧.**ನಿರ್ದೇಶಕರು**, ಪದವಿಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಬೆಂಗಳೂರು-560012 | ಸದಸ್ಯರು |
| ೧೨.**ನಿರ್ದೇಶಕರು**, ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು-560009 | ಸದಸ್ಯರು |
| ೧೩.**ನಿರ್ದೇಶಕರು**, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-560001 | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯ ಸದಸ್ಯರಾದ ವಿದ್ವಾನ್ ಕೆ. ಭೀಮಪ್ಪ ಅವರ ನಿಧನಕ್ಕೆ ಒಂದು ನಿಮಿಷ ಮೌನಾಚರಣೆ ಮಾಡಲಾಯಿತು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಂಡಿತವಾಗಿ ನಿರ್ಣಯಗೊಂಡವು.

| ವಿ.ಸಂ. | ವಿಷಯ ಮತ್ತು ಟಿಪ್ಪಣಿ | ನಿರ್ಣಯ |
|---|---|---|
| ವಿಷಯ 01 | **ಪ್ರಶಾಸನ ಸಮಿತಿ 40ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ.**<br>ಪ್ರಶಾಸನ ಸಮಿತಿ 40ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 27.10.2017 ರಂದು ನಡೆಯಿತು. ಸಭೆಯ ನಿರ್ಣಯದಂತೆ ಕೈಗೊಳ್ಳಲಾದ ಅನುಪಾಲನಾ ವರದಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. | |
| ನಿರ್ಣಯ | **ಸಭೆಯು ಪ್ರಶಾಸನ ಸಮಿತಿ 40ನೇ ಸಭೆಯ ಅನುಪಾಲನಾ ವರದಿಯನ್ನು ಪರಿಶೀಲಿಸಿ, ಒಪ್ಪಿಗೆಯನ್ನು ನೀಡಿತು.** | |

| | | |
|---|---|---|
| ವಿಷಯ 02 | **'ಹಣಕಾಸು ಸಮಿತಿ' 27ನೇ ಸಭೆಯ ನಡಾವಳಿಗಳನ್ನು ಅನುಮೋದಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಹಣಕಾಸು ಸಮಿತಿ' 27ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 14.12.2017ರಂದು ನಡೆಯಿತು. ಆ ಸಭೆಯ ನಡಾವಳಿಗಳನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. | |
| ನಿರ್ಣಯ | **ಸಭೆಯು ಹಣಕಾಸು ಸಮಿತಿಯ 27ನೇ ಸಭೆಯ ನಡಾವಳಿಯನ್ನು ಪರಿಶೀಲಿಸಿ, ಒಪ್ಪಿಗೆಯನ್ನು ನೀಡಿತು.** | |
| ವಿಷಯ 03 | **ರಾಜ್ಯಮಟ್ಟದ ಸ್ಪರ್ಧೆಗಳನ್ನು ನಡೆಸಿರುವುದಕ್ಕೆ ಘಟನೋತ್ತರ ಅನುಮೋದನೆಯನ್ನು ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನದ ಸಂಸ್ಕೃತ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗಾಗಿ 2017ರ ಡಿಸೆಂಬರ್ 3–4 ರಂದು ಉಡುಪಿಯ ಎಸ್.ಎಂ.ಎಸ್.ಪಿ. ಸಂಸ್ಕೃತ ಕಾಲೇಜಿನಲ್ಲಿ ರಾಜ್ಯಮಟ್ಟದ ಸ್ಪರ್ಧೆಗಳನ್ನು ನಡೆಸಲಾಯಿತು. ಸ್ಪರ್ಧೆಗಳ ಆಯೋಜನೆಗಾಗಿ ರೂ. 6.00 ಲಕ್ಷ ಮುಂಗಡವನ್ನು ಪಡೆದುಕೊಳ್ಳಲಾಗಿತ್ತು. ಈ ಸ್ಪರ್ಧೆಗಳಿಗೆ ಖರ್ಚಾದ ಒಟ್ಟು ಮೊತ್ತದ ವಿವರಗಳನ್ನು ಸಭೆಯಲ್ಲಿ ಮಂಡಿಸಲಾಯಿತು. ಒಟ್ಟು ವೆಚ್ಚಕ್ಕೆ ಪ್ರಶಾಸನ ಸಮಿತಿಯ ಘಟನೋತ್ತರ ಅನುಮೋದನೆಯನ್ನು ಕೋರಿದೆ. | |
| ನಿರ್ಣಯ | **ಸಭೆಯು ಒಟ್ಟು ವೆಚ್ಚಕ್ಕೆ (ರೂ. 5,15,244/–) ಒಪ್ಪಿಗೆಯನ್ನು ನೀಡಿತು.** | |
| ವಿಷಯ 04 | **ಆರನೇ ದೀಕ್ಷಾಂತ ಘಟಿಕೋತ್ಸವವನ್ನು ಜನವರಿ ಕೊನೆಯ ವಾರ ಅಥವಾ ಫೆಬ್ರವರಿ ಮೊದಲ ವಾರದಲ್ಲಿ ನಡೆಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆರನೇ ದೀಕ್ಷಾಂತ ಘಟಿಕೋತ್ಸವವನ್ನು ನಡೆಸಲು ಹಾಗೂ ಈ ಸಮಾರಂಭಕ್ಕೆ ತಗಲುವ ಅಂದಾಜು ವೆಚ್ಚಕ್ಕೆ ದಿನಾಂಕ: 27.10.2017ರಂದು ನಡೆದ ಪ್ರಶಾಸನ ಸಮಿತಿ 40ನೇ ಸಭೆಯಲ್ಲಿ ಒಪ್ಪಿಗೆಯನ್ನು ಪಡೆಯಲಾಗಿದೆ. ಅದರಂತೆ, ಆರನೇ ದೀಕ್ಷಾಂತ ಘಟಿಕೋತ್ಸವವನ್ನು ನಡೆಸಲು 2018ರ ಜನವರಿ ಕೊನೆಯ ವಾರ ಅಥವಾ ಫೆಬ್ರವರಿ ಮೊದಲ ವಾರದಲ್ಲಿ ಸೂಕ್ತ ದಿನಾಂಕವನ್ನು ನೀಡುವಂತೆ ಕೋರಿ ಘನತೆವೆತ್ತ ರಾಜ್ಯಪಾಲರಿಗೆ ಪತ್ರವನ್ನು ಬರೆಯಲಾಗಿದೆ. ಘನತೆವೆತ್ತ ರಾಜ್ಯಪಾಲರು ಸೂಚಿಸುವ ದಿನಾಂಕದಂದು ಘಟಿಕೋತ್ಸವವನ್ನು ನಡೆಸಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. | |
| ನಿರ್ಣಯ | **ಸಭೆಯು ಅನುಮೋದನೆಯನ್ನು ನೀಡಿತು.** | |
| ವಿಷಯ 05 | **ಆರನೇ ದೀಕ್ಷಾಂತ ಘಟಿಕೋತ್ಸವದಲ್ಲಿ 'ದೀಕ್ಷಾಂತ ಭಾಷಣ' ಮಾಡಲು ವಿದ್ವಾಂಸರ ಪಟ್ಟಿಯನ್ನು ಸಲ್ಲಿಸಿರುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆರನೇ ದೀಕ್ಷಾಂತ ಘಟಿಕೋತ್ಸವದಲ್ಲಿ 'ದೀಕ್ಷಾಂತ ಭಾಷಣ' ಮಾಡಲು ಈ ಕೆಳಕಂಡ ಹಿರಿಯ ವಿದ್ವಾಂಸರ ಪಟ್ಟಿಯನ್ನು ಘನತೆವೆತ್ತ ರಾಜ್ಯಪಾಲರಿಗೆ ಸಲ್ಲಿಸಲಾಗಿದೆ. ಈ ಪಟ್ಟಿಯಲ್ಲಿರುವ ಗಣ್ಯವಿದ್ವಾಂಸರ ಪೈಕಿ ಒಬ್ಬರನ್ನು ದೀಕ್ಷಾಂತ ಭಾಷಣವನ್ನು ಮಾಡಲು ಆಹ್ವಾನಿಸಲಾಗುವುದು. ಪ್ರಶಾಸನ ಸಮಿತಿಯ ಅವಗಾಹನೆಗಾಗಿ ಈ ವಿಷಯವನ್ನು ಮಂಡಿಸಿದೆ.<br>1. **ಶ್ರೀ ಇ.ಎಸ್.ಎಲ್. ನರಸಿಂಹನ್,** ಘನತೆವೆತ್ತ ರಾಜ್ಯಪಾಲರು, ಆಂಧ್ರಪ್ರದೇಶ & ತೆಲಂಗಾಣ<br>2. **ಆಚಾರ್ಯ ದೇವ ವ್ರತ,** ಘನತೆವೆತ್ತ ರಾಜ್ಯಪಾಲರು, ಹಿಮಾಚಲ ಪ್ರದೇಶ<br>3. **ಪ್ರೊ. ಸತ್ಯವ್ರತಶಾಸ್ತ್ರಿ,** ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು, ನವದೆಹಲಿ<br>4. **ಪ್ರೊ. ಉಮಾ ಸಿ. ವೈದ್ಯ,** ವಿಶ್ರಾಂತ ಕುಲಪತಿಗಳು, ಮುಂಬಯಿ | |
| ನಿರ್ಣಯ | **ಸಭೆಯು ಅನುಮೋದನೆಯನ್ನು ನೀಡಿತು.** | |
| ವಿಷಯ 06 | **ಮಹಮದ್ ಮುದಾಸಿರ್, ಗ್ರೂಪ್ ಡಿ (ಕಾವಲುಗಾರ) –ಇವರ ವಿರುದ್ಧ ಸೂಕ್ತಕ್ರಮ ಜರುಗಿಸುವ ಬಗೆಗೆ.**<br>ಮಹಮದ್ ಮುದಾಸಿರ್ –ಇವರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಗ್ರೂಪ್ ಡಿ (ಕಾವಲುಗಾರ) ಹುದ್ದೆಯ ಕರ್ತವ್ಯಕ್ಕೆ ದಿನಾಂಕ: 09.09.2015ರಂದು ವರದಿ ಮಾಡಿಕೊಂಡಿದ್ದು, ತಮ್ಮ ಸೇವಾವಧಿಯಲ್ಲಿ ಯಾವುದೇ ಪೂರ್ವಾನುಮತಿ ಪಡೆಯದೇ ಅಥವಾ ರಜೆ ಮಂಜೂರಾತಿ ಪಡೆಯದೆ, ಅನಧಿಕೃತ ಗೈರುಹಾಜರಿ ಬಗ್ಗೆ ಹಲವಾರು ಬಾರಿ ನೋಟೀಸ್‌ಗಳನ್ನು ನೀಡಿದ್ದರೂ ಒಟ್ಟು 142 ದಿನಗಳ ಕಾಲ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾಗಿರುತ್ತಾರೆ. ಈ ಹಿನ್ನೆಲೆಯಲ್ಲಿ, ಇವರ ವಿರುದ್ಧ ಸೂಕ್ತಕ್ರಮಕ್ಕಾಗಿ ದಿನಾಂಕ: 05.07.2016ರಂದು ನಡೆದ ಪ್ರಶಾಸನ ಸಮಿತಿ 33ನೇ ಸಭೆಯಲ್ಲಿ ಮಂಡಿಸಲಾಗಿತ್ತು. ಪ್ರಶಾಸನ ಸಮಿತಿಯ ನಿರ್ಣಯದಂತೆ, ಸದರಿ ಸಿಬ್ಬಂದಿಗೆ ಎಚ್ಚರಿಕೆ ನೋಟೀಸನ್ನು ನೀಡಿ, ಇನ್ನುಮುಂದೆ ಅನಧಿಕೃತ ಗೈರುಹಾಜರಿ ಆಗುವುದಿಲ್ಲ ಎಂದು ಇ–ಸ್ಟಾಂಪ್ ಪತ್ರದಲ್ಲಿ ಮುಚ್ಚಳಿಕೆಯನ್ನೂ ಬರೆಸಿಕೊಳ್ಳಲಾಗಿದೆ. ಆದರೂ ಸದರಿ ಸಿಬ್ಬಂದಿಯು ತಮ್ಮ ವರ್ತನೆಯನ್ನು ಪುನರಾವರ್ತಿಸಿ, ದಿನಾಂಕ: 25.06.2016ರಿಂದ 26.11.2016ರ ಅವಧಿಯಲ್ಲಿ 35 ದಿನಗಳು ಹಾಗೂ 03.03.2017ರಿಂದ 09.10.2017ರ ವರೆಗೆ 59 ದಿನಗಳ ಕಾಲ; ಒಟ್ಟು 94 ದಿನಗಳು | |

| | | |
|---|---|---|
| | ಗೈರುಹಾಜರಾಗಿದ್ದಾರೆ. ಹೀಗೆ, ಸದರಿ ಸಿಬ್ಬಂದಿಯು ತಮ್ಮ ಈವರೆಗಿನ ಸೇವಾವಧಿಯಲ್ಲಿ ಒಟ್ಟು 236 ದಿನಗಳ ಕಾಲ ಅನಧಿಕೃತ ಗೈರುಹಾಜರಿಯಾಗಿರುತ್ತಾರೆ. ಈ ಹಿನ್ನೆಲೆಯಲ್ಲಿ ಮಹಮದ್ ಮುದಾಸಿರ್, ಗ್ರೂಪ್ ಡಿ (ಕಾವಲುಗಾರ) –ಇವರ ವಿರುದ್ಧ ನಿಯಮಾನುಸಾರ ಶಿಸ್ತುಕ್ರಮ ಜರುಗಿಸಲು ಅನುಮೋದನೆಗಾಗಿ ದಿನಾಂಕ: 27.10.2017ರಂದು ನಡೆದ ಪ್ರಶಾಸನ ಸಮಿತಿ 40ನೇ ಸಭೆಯಲ್ಲಿ ಮಂಡಿಸಲಾಗಿತ್ತು. ಸದರಿ ಸಭೆಯಲ್ಲಿ ಸಂಬಂಧಿತ ನೌಕರನಿಗೆ ಕೊನೆಯ ಅವಕಾಶವನ್ನು ಕಲ್ಪಿಸಿ ನೋಟೀಸ್ ನೀಡುವುದಕ್ಕೆ ಕುಲಸಚಿವರಿಗೆ ನಿರ್ದೇಶನವನ್ನು ನೀಡಲಾಗಿತ್ತು. ಅದರಂತೆ ಕ್ರಮವಹಿಸಿ, ದಿನಾಂಕ: 04.11.2017ರಂದು 'ಅಂತಿಮ ನೋಟೀಸ್–3'ನ್ನು ನೀಡಿ ಸದರಿ ನೌಕರನನ್ನು 'ಏಕೆ ಕರ್ತವ್ಯದಿಂದ ಬಿಡುಗಡೆಗೊಳಿಸಬಾರದು' ಎಂಬುದಕ್ಕೆ ಸೂಕ್ತ ಸಮಜಾಯಿಷಿ ನೀಡಲು ಸೂಚಿಸಲಾಗಿತ್ತು. ಸದರಿ ನೌಕರನು ದಿನಾಂಕ: 16.11.2017ರಂದು ಈ ನೋಟೀಸ್‌ಗೆ ಉತ್ತರವನ್ನು ನೀಡಿರುತ್ತಾನೆ. ಈ ಹಿಂದೆ ನೀಡಲಾಗಿದ್ದ ನೋಟೀಸ್‌ಗಳಿಗೆ ನೀಡಲಾಗಿದ್ದ ಉತ್ತರದ ರೀತಿಯಲ್ಲಿಯೇ ಈ ನೋಟೀಸ್‌ಗೂ ಉತ್ತರವನ್ನು ನೀಡಿರುತ್ತಾನೆ. ಈ ಉತ್ತರವು ನೌಕರನನ್ನು 'ಏಕೆ ಕರ್ತವ್ಯದಿಂದ ಬಿಡುಗಡೆಗೊಳಿಸಬಾರದು' ಎಂಬುದಕ್ಕೆ ಸೂಕ್ತ ಸಮಜಾಯಿಷಿಯೆಂದು ಪರಿಗಣಿಸಲು ಸಾಧ್ಯವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸದರಿ ನೌಕರನ ವಿರುದ್ಧ ಮುಂದಿನ ಸೂಕ್ತ ಕ್ರಮಕೈಗೊಳ್ಳಲು ಪ್ರಶಾಸನ ಸಮಿತಿಯ ನಿರ್ಣಯಕ್ಕೆ ಮಂಡಿಸಿದೆ. | |
| ನಿರ್ಣಯ | **ಸಭೆಯು ಸದರಿ ಸಿಬ್ಬಂದಿಯನ್ನು ನಿಯಮಾನುಸಾರ ಕರ್ತವ್ಯದಿಂದ ಬಿಡುಗಡೆಗೊಳಿಸುವ ಸಂಬಂಧ ಮುಂದಿನ ಕ್ರಮ ಕೈಗೊಳ್ಳಲು ಅನುಮೋದನೆಯನ್ನು ನೀಡಿತು.** | |
| ವಿಷಯ 07 | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ 'ಸ್ನಾತಕಪೂರ್ವ ದೀಕ್ಷಾಂತ ಸಮಾರೋಹ' ಸಮಾರಂಭಕ್ಕೆ ತಗುಲಿದ ವೆಚ್ಚಕ್ಕೆ ಅನುಮೋದನೆಯನ್ನು ನೀಡುವ ಬಗೆಗೆ.**<br>ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ 'ಸ್ನಾತಕಪೂರ್ವ ದೀಕ್ಷಾಂತ ಸಮಾರೋಹ' ಸಮಾರಂಭವನ್ನು ದಿನಾಂಕ: 30.11.2017ರಂದು ಬೆಂಗಳೂರಿನ ಕುವೆಂಪು ಕಲಾಕ್ಷೇತ್ರದಲ್ಲಿ ಯಶಸ್ವಿಯಾಗಿ ನಡೆಸಲಾಯಿತು. ಈ ಸಮಾರಂಭಕ್ಕಾಗಿ 3.40 ಲಕ್ಷ ರೂಪಾಯಿಗಳ ಅಂದಾಜು ವೆಚ್ಚಕ್ಕೆ ದಿನಾಂಕ: 27.10.2017ರಂದು ನಡೆದ ಪ್ರಶಾಸನ ಸಮಿತಿ 40ನೇ ಸಭೆಯ ಅನುಮೋದನೆಯನ್ನು ಪಡೆಯಲಾಗಿತ್ತು. ಸ್ನಾತಕಪೂರ್ವ ದೀಕ್ಷಾಂತ ಸಮಾರೋಹಕ್ಕಾಗಿ ಒಟ್ಟಾರೆ 1,98,986/– ರೂಪಾಯಿಗಳು ವೆಚ್ಚವಾಗಿದ್ದು, ಈ ಮೊತ್ತಕ್ಕೆ ಪ್ರಶಾಸನ ಸಮಿತಿಯ ಅನುಮೋದನೆಯನ್ನು ಕೋರಿ ಮಂಡಿಸಲಾಗಿದೆ. | |
| ನಿರ್ಣಯ | **ಸಭೆಯು ಒಟ್ಟು ವೆಚ್ಚಕ್ಕೆ ಅನುಮೋದನೆಯನ್ನು ನೀಡಿತು.** | |
| ವಿಷಯ 08 | **ಪ್ರೊ. ಅಭಿಜಿತ್ ಜೋಷಿ, ತಿಲಕ ಮಹಾರಾಷ್ಟ್ರ ವಿದ್ಯಾಪೀಠ, ಪುಣೆ –ಇವರಿಗೆ ಡಿ.ಲಿಟ್ ಪದವಿಗೆ ಆವೇದನೆ ಸಲ್ಲಿಸಲು ಅವಕಾಶ ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಡಿ.ಲಿಟ್ ಪದವಿಯ 2013ನೇ ವರ್ಷದ ನಿಯಮಾವಳಿಯ ಪ್ರಕಾರ ಸಂಸ್ಕೃತದಲ್ಲಿ ಬರೆದ ಪ್ರಬಂಧಕ್ಕೆ ಮಾತ್ರ ಡಿ.ಲಿಟ್ ಪದವಿಯನ್ನು ಕೊಡಬಹುದೆಂದು ನಿರ್ಧಾರಿಸಲಾಗಿದೆ. ಪ್ರಕೃತ ಪುಣೆಯ ಪ್ರತಿಷ್ಠಿತ ವಿಶ್ವವಿದ್ಯಾಲಯವಾದ ತಿಲಕ ಮಹಾರಾಷ್ಟ್ರ ವಿದ್ಯಾಪೀಠದ ಕುಲಸಚಿವ ಪದವಿಯನ್ನು ನಿರ್ವಹಿಸುತ್ತಿರುವ ಪ್ರೊ. ಅಭಿಜಿತ್ ಜೋಷಿ (ಆಯುರ್ವೇದ ಪ್ರಾಧ್ಯಾಪಕರು ಹಾಗೂ ಸಂಸ್ಕೃತಜ್ಞರು) ಇವರು ಆಧುನಿಕ ಅಲೋಪಥಿಕ್ ವೈದ್ಯಕೀಯ ಮಾನದಂಡಗಳಿಂದಲೂ ಪ್ರಮಾಣೀಕರಿಸಲ್ಪಟ್ಟ ಮಂತ್ರ ಚಿಕಿತ್ಸೆಯ ಪರಿಣಾಮಗಳನ್ನು ಪ್ರಯೋಗದ ಮೂಲಕ ಸಂಶೋಧನೆ ಮಾಡಿ 'ದೈವ ವ್ಯಪಾಶ್ರಯ ಚಿಕಿತ್ಸಾ' ಎಂಬ ಶೀರ್ಷಿಕೆಯಲ್ಲಿ ಡಿ.ಲಿಟ್ ಪ್ರಬಂಧವನ್ನು ಸಮರ್ಪಿಸಲು ಇಚ್ಛಿಸಿದ್ದಾರೆ. ಇವರು ನಿಯಮಾವಳಿಯ ಉಳಿದ ಮಾನದಂಡಗಳನ್ನು ಹೊಂದಿದ್ದು, ಪ್ರಾಚೀನ ಭಾರತೀಯ ವಿಜ್ಞಾನ ನಿಕಾಯದ ಆಯುರ್ವೇದ ವಿಭಾಗದಲ್ಲಿ ಡಿ.ಲಿಟ್ ಪ್ರಬಂಧವನ್ನು ಸಲ್ಲಿಸಬಹುದಾಗಿದೆ. ಇವರು ಪ್ರಾಚೀನ ಭಾರತೀಯ ಶಾಸ್ತ್ರಗಳ ಆಧಾರದಿಂದ ಅವುಗಳ ಪ್ರಮಾಣೀಕರಣಕ್ಕಾಗಿ ಈ ಪ್ರಬಂಧವನ್ನು ರಚಿಸಿದ್ದು, ಇದರಿಂದ ಪ್ರಾಚೀನ ಭಾರತೀಯ ಶಾಸ್ತ್ರಗಳ ಮಹತ್ತ್ವವು ಜಗತ್ತಿಗೆ ಗೊತ್ತಾಗುತ್ತದೆ. ಆಧುನಿಕ ವೈದ್ಯಕೀಯ ಮಾನದಂಡಗಳನ್ನು ಆಧರಿಸಿರುವುದರಿಂದ ಈ ಪ್ರಬಂಧವನ್ನು ಆಂಗ್ಲಭಾಷೆಯಲ್ಲಿ ಸಮರ್ಪಿಸಲು ಇವರು ಕೋರಿರುತ್ತಾರೆ. ಈ ವಿಷಯದ ಬಗ್ಗೆ ಚರ್ಚಿಸಲು ಪ್ರಶಾಸನ ಸಮಿತಿ ಸಭೆಯಲ್ಲಿ ಮಂಡಿಸಲಾಗಿದೆ. | |
| ನಿರ್ಣಯ | **ಪ್ರೊ. ಅಭಿಜಿತ್ ಜೋಶಿ ಇವರ ಶ್ರೋಧ ಪ್ರಬಂಧವು ಆಂಗ್ಲಭಾಷೆಯಲ್ಲಿ ಇರುವುದರಿಂದ ನಿಯಮಾನುಸಾರ ಒಪ್ಪಿಗೆಯನ್ನು ನೀಡಲು ಸಾಧ್ಯವಿಲ್ಲವೆಂದು ಸಭೆಯು ಅಭಿಪ್ರಾಯಪಟ್ಟಿತು.** | |
| ವಿಷಯ 09 | **ಸಂಸ್ಕೃತ ಸಂಶೋಧನ ಸಂಸತ್‌ನ 'ಆಡಳಿತ ಮಂಡಳಿ' ನಾಲ್ಕನೇ ಸಭೆ ಹಾಗೂ 'ಪ್ರಸಾರಾಂಗ ಸಲಹಾ ಸಮಿತಿ' ನಾಲ್ಕನೇ ಸಭೆಯ ನಡಾವಳಿಗಳನ್ನು ಅನುಮೋದಿಸುವ ಬಗೆಗೆ.** | |

<table>
<tr><td>ವಿಷಯ<br>04</td><td>ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್‌ಗೆ ನಿರ್ದೇಶಕರನ್ನು ನೇಮಿಸುವ ಬಗೆಗೆ.<br>ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್ ಸರ್ಕಾರದ ಆದೇಶ ಸಂಖ್ಯೆ: ಇಡಿ 98 ಯುಆರ್‌ಸಿ 2009(ಭಾಗ–4); ದಿನಾಂಕ: 15.12.2015ರಂತೆ ವಿಶ್ವವಿದ್ಯಾಲಯದ ಆಡಳಿತಕ್ಕೆ ಒಳಪಟ್ಟಿರುತ್ತದೆ. ಇಲ್ಲಿಗೆ ವಿಶ್ವವಿದ್ಯಾಲಯದ ಆದೇಶ ಸಂಖ್ಯೆ: ಕಸಂವಿ/ಆಡಳಿತ/ಸಂ.ಸಂ.ಸಂ./ಪ್ರ.ನಿ.ನೇ/2016–17; ದಿನಾಂಕ: 28.12.2016ರಂತೆ ಪ್ರೊ. ಶ್ರೀನಿವಾಸ ವರಖೇಡಿ–ಇವರನ್ನು ಪ್ರಭಾರ ನಿರ್ದೇಶಕರಾಗಿ ನೇಮಿಸಲಾಗಿದ್ದಿತು. ಇವರು ಮಹಾರಾಷ್ಟ್ರ ನಾಗಪುರದ ಕವಿಕುಲಗುರು ಕಾಳಿದಾಸ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡಿರುತ್ತಾರೆ. ಹಾಗಾಗಿ ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್‌ನ ನಿರ್ದೇಶಕ ಹುದ್ದೆಯು ಖಾಲಿಯಿದ್ದು, ಈ ಹುದ್ದೆಗೆ ನಿರ್ದೇಶಕರನ್ನು ನೇಮಿಸಲು ನಿರ್ದೇಶಕರ ಆಯ್ಕೆಗಾಗಿ ವಿಷಯ ಮಂಡಿಸಿದೆ.</td><td></td></tr>
<tr><td>ನಿರ್ಣಯ</td><td>ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್‌ನ ಪ್ರಭಾರ ನಿರ್ದೇಶಕರನ್ನಾಗಿ ಡಾ.ವೀರನಾರಾಯಣ ಎನ್.ಕೆ. ಪಾಂಡುರಂಗಿ ಅವರನ್ನು ತಾತ್ಕಾಲಿಕವಾಗಿ ನಿಯೋಜಿಸಲು ಸಭೆಯು ಅನುಮೋದನೆಯನ್ನು ನೀಡಿತು.</td><td></td></tr>
<tr><td>ವಿಷಯ<br>05</td><td>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಹಿರಿಯ ನ್ಯಾಯವಾದಿ (Senior Counsel) ನೇಮಿಸುವ ಬಗೆಗೆ.<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನ್ಯಾಯಾಲಯದ ಪ್ರಕರಣಗಳನ್ನು ನ್ಯಾಯಾಲಯದಲ್ಲಿ ವಿಶ್ವವಿದ್ಯಾಲಯದ ಪರವಾಗಿ ಹಾಜರಿರಲು ಮತ್ತು ವಾದಿಸಲು ನ್ಯಾಯವಾದಿಗಳನ್ನು ನೇಮಿಸಲಾಗಿರುತ್ತದೆ. ಪ್ರಕರಣಗಳ ಸಂದರ್ಭ ಮತ್ತು ಗಂಭೀರತೆಯನ್ನು ಪರಿಗಣಿಸಿ ನ್ಯಾಯಾಲಯಗಳಲ್ಲಿ ವಾದಿಸಲು ಹಿರಿಯ ನ್ಯಾಯವಾದಿ (Senior Counsel)ಗಳನ್ನು ನೇಮಿಸಬೇಕಾಗಿರುತ್ತದೆ. ಈಗಾಗಲೇ ಮಾನ್ಯ ಉಚ್ಚ ನ್ಯಾಯಾಲಯದಲ್ಲಿನ ಜಮಖಂಡಿಯ ಶ್ರೀ ಲಕ್ಷ್ಮೀನರಸಿಂಹ ಸಂಸ್ಕೃತ ಪ್ರಚಾರಕ ಸಮಿತಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ನ್ಯಾಯವಾದಿಗಳಿಗೆ ಹಿರಿಯ ನ್ಯಾಯವಾದಿಯನ್ನು ನೇಮಿಸಿಕೊಳ್ಳು ವಂತೆ ಆದೇಶ ನೀಡಲಾಗಿರುತ್ತದೆ. ಈ ಬಗ್ಗೆ ಅನುಮತಿ ಮತ್ತು ಅನುಮೋದನೆಗಾಗಿ ಮಂಡಿಸಿದೆ.</td><td></td></tr>
<tr><td>ನಿರ್ಣಯ</td><td>ಸಭೆಯು ಇದಕ್ಕೆ ಅನುಮೋದನೆಯನ್ನು ನೀಡಿತು.</td><td></td></tr>
<tr><td>ವಿಷಯ<br>06</td><td>ಹೈದರಾಬಾದ್–ಕರ್ನಾಟಕ ಪ್ರದೇಶದವರಿಗೆ ಮೀಸಲಿರಿಸಿದ ರಾಜ್ಯ ವೇತನಶ್ರೇಣಿಯ ಬೋಧಕೇತರ ಹುದ್ದೆಗಳ ನೇಮಕಾತಿಯನ್ನು ಅನುಮೋದಿಸುವ ಬಗೆಗೆ.<br>ಸರ್ಕಾರದ ಪತ್ರ ಸಂಖ್ಯೆ: ಇಡಿ 572 ಯುಎನ್‌ಇ 2014; ದಿನಾಂಕ: 27.09.2017ರ ಸೂಚನೆಯಂತೆ, ಅಧಿಸೂಚನೆ ಸಂಖ್ಯೆ: ಕಸಂವಿ/ಕ.ರಾ.ವೇ/ಬೋಧಕ ಬೋಧಕೇತರ ಹುದ್ದೆ ನೇ 17/2016–17; ದಿನಾಂಕ: 08.11.2017ರ ಅನ್ವಯ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ್ದ ಅರ್ಹ ಅಭ್ಯರ್ಥಿಗಳಿಗೆ ದಿನಾಂಕ: 21.12.2017 ರಂದು ಲಿಖಿತ ಪರೀಕ್ಷೆ ಹಾಗೂ ಸಂದರ್ಶನವನ್ನು ನಡೆಸಲಾಯಿತು. ಆಯ್ಕೆ ಸಮಿತಿಯ ಶಿಫಾರಸ್ಸಿನ ಅನ್ವಯ ಆಯಾ ಹುದ್ದೆಗಳಿಗೆ ಆಯ್ಕೆ ಆಗಿರುವ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.</td><td></td></tr>
<tr><td>ನಿರ್ಣಯ</td><td>ರಾಜ್ಯ ವೇತನಶ್ರೇಣಿಯ ಬೋಧಕೇತರ ಹಿರಿಯ ಸಹಾಯಕ ಹಾಗೂ ಟೆಲಿಫೋನ್ ಆಪರೇಟರ್ ಹುದ್ದೆಗಳಿಗೆ ದಿನಾಂಕ: 21.12.2017ರಂದು ನಡೆದ 'ಆಯ್ಕೆ ಸಮಿತಿ' ಸಭೆಯ ಶಿಫಾರಸ್ಸುಗಳನ್ನು ಸಂಪೂರ್ಣವಾಗಿ ಪರಿಶೀಲಿಸಿತು. ಆಯಾ ಹುದ್ದೆಗಳಿಗೆ ಬೇಕಾಗುವ ಸೇವಾ ಅನುಭವ, ಜ್ಯೇಷ್ಠತೆ ಮತ್ತು ಶೈಕ್ಷಣಿಕ ಅರ್ಹತೆಯನ್ನು ಕ್ರಮಾನುಸಾರವಾಗಿ ಪರಿಗಣಿಸಿ ಆಯ್ಕೆಗೊಂಡಿರುವ ಅಭ್ಯರ್ಥಿಗಳಿಗೆ ಸಭೆಯು ಅನುಮೋದನೆಯನ್ನು ನೀಡಿತು.
<table>
<tr><th>ಕ್ರ.ಸಂ.</th><th>ಹುದ್ದೆಯ ಪದನಾಮ</th><th>ಆಯ್ಕೆಗೊಂಡ ಅಭ್ಯರ್ಥಿಗಳು</th><th>ಮೀಸಲಾತಿ</th></tr>
<tr><td>01.</td><td>ಹಿರಿಯ ಸಹಾಯಕ</td><td>ಶ್ರೀ ಚಂದ್ರಶೇಖರ್ ಸಿ. ಪಾಟೀಲ್<br>s/o ಲೇ. ಚನ್ನಬಸನಗೌಡ ಬಿ. ಪಾಟೀಲ್<br>ಮಲಕಾಪುರ ಗ್ರಾಮ,<br>ಕುಷ್ಠಗಿ (ತಾ) ಕೊಪ್ಪಳ (ಜಿಲ್ಲೆ)</td><td>ಮೀಸಲುರಹಿತ<br>(ಹೈ–ಕ)</td></tr>
<tr><td>02.</td><td>ಟೆಲಿಫೋನ್ ಆಪರೇಟರ್</td><td>ಶ್ರೀ ಪವನ ಕುಮಾರ ಬಿ<br>s/o ಕೃಷ್ಣಪ್ಪ ಬಿ.<br>1ನೇ ವಾರ್ಡ್, ಸಂತೆಬಯಲು,<br>ಚಿತ್ತವಾಡ್ಗಿ (ಅಂಚೆ), ಹೊಸಪೇಟೆ (ತಾ)<br>ಬಳ್ಳಾರಿ (ಜಿಲ್ಲೆ)</td><td>ಮೀಸಲುರಹಿತ<br>(ಹೈ–ಕ)</td></tr>
</table>
ಉಳಿದಂತೆ, ಅಧಿಸೂಚನೆಯಲ್ಲಿ ಹೈದರಾಬಾದ್–ಕರ್ನಾಟಕ ಪ್ರದೇಶದವರಿಗಾಗಿ ಮೀಸಲಿರಿಸಿದ ಹುದ್ದೆಗಳ ಪೈಕಿ– ಯೋಜನಾ</td><td></td></tr>
</table>

| | | |
|---|---|---|
| | ಸಹಾಯಕ (ಶೈಕ್ಷಣಿಕ) – **01** (ಹೈ.ಕ.–ಪ.ಜಾ.) ; ಯೋಜನಾ ಸಹಾಯಕ (ಶೈಕ್ಷಣಿಕ) – **01** (ಹೈ.ಕ.–ಪ.ಪಂ.); ಸಿಸ್ಟಂ ಅನಲಿಸ್ಟ್ – **01**(ಹೈ.ಕ.–ಮೀಸಲುರಹಿತ); ಗ್ರಂಥಾಲಯ ಸಹಾಯಕ – **01**(ಹೈ.ಕ.–ಮೀಸಲುರಹಿತ); ಡಾಟಾ ಎಂಟ್ರಿ ಆಪರೇಟರ್ – **01**(ಹೈ.ಕ.–ಮೀಸಲುರಹಿತ) – ಈ ಹುದ್ದೆಗಳಿಗೆ ಸೂಕ್ತ ಅಭ್ಯರ್ಥಿಗಳು ಇಲ್ಲದಿರುವ ಹಿನ್ನೆಲೆಯಲ್ಲಿ ಮತ್ತೊಮ್ಮೆ ಅಧಿಸೂಚನೆಯನ್ನು ಹೊರಡಿಸಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕ್ರಮಕೈಗೊಳ್ಳಬಹುದೆಂದು ಸಭೆಯು ಸೂಚಿಸಿತು. ನೇಮಕಾತಿ ಹೊಂದಿರುವವರು ನೇಮಕಾತಿ ಆದೇಶ ಹೊರಡಿಸಿದ ಒಂದು ವಾರದ ಒಳಗೆ ಕರ್ತವ್ಯಕ್ಕೆ ಹಾಜರಾಗಲು ಸಭೆಯು ಸೂಚಿಸಿತು ಹಾಗೂ ಹೈದರಾಬಾದ್-ಕರ್ನಾಟಕ ಪ್ರದೇಶದವರಿಗಾಗಿ ಮೀಸಲಿರಿಸಿರುವ ವಿವಿಧ ಹುದ್ದೆಗಳಿಗೆ ಅಧಿಸೂಚನೆಯನ್ನು ಹೊರಡಿಸಿ ನಿಯಮಾನುಸಾರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಒಪ್ಪಿಗೆ ಸೂಚಿಸಿತು. | |
| ವಿಷಯ 07 | **ಕಸಂವಿ ಸಿಬ್ಬಂದಿಗಳ ರಜಾ ವೇತನ ವಂತಿಕೆ ಮತ್ತು ಪಿಂಚಣಿ ನಿಧಿ ಹಣವನ್ನು ಜಮಾ ಮಾಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಹಿಂದೆ ಸೇವೆ ಸಲ್ಲಿಸುತ್ತಿದ್ದ ಸಂಸ್ಥೆಯಿಂದ ಅನುಮತಿ ಪಡೆದು ಅರ್ಜಿ ಸಲ್ಲಿಸಿ ನೇಮಕಗೊಂಡಿರುವ ಸಿಬ್ಬಂದಿಗಳಾದ (i) ಡಾ. ಶ್ರೀನಿವಾಸ ವರಖೇಡಿ, ಪ್ರಾಧ್ಯಾಪಕರು, ಶಾಸ್ತ್ರ ನಿಕಾಯ, (ii) ಡಾ. ವಿ. ಗಿರೀಶಚಂದ್ರ, ಪ್ರಾಧ್ಯಾಪಕರು, ಭಾಷಾ ನಿಕಾಯ, (iii) ವಿದ್ವಾನ್ ಪಿ.ಆರ್. ಪಾಗೋಜಿ, ಉಪಕುಲಸಚಿವರು, (iv) ವಿದ್ವಾನ್ ಎಂ. ಶಿವಮೂರ್ತಿ, ಶಾಖಾಧಿಕಾರಿಗಳು, (v) ವಿದ್ವಾನ್ ತಿಮ್ಮಣ್ಣ ಆರ್, ಯೋಜನಾ ಸಹಾಯಕರು, (ಶೈಕ್ಷಣಿಕ), (vi) ವಿದುಷಿ ಸಾವಿತ್ರಿ ಪೂಜಾರಿ, ಯೋಜನಾ ಸಹಾಯಕರು, (ಶೈಕ್ಷಣಿಕ) ಇವರುಗಳ ಪಿಂಚಣಿ ನಿಯಮಾವಳಿ ಮೇರೆಗೆ ವಿಶ್ವವಿದ್ಯಾಲಯದಲ್ಲಿ ಪಿಂಚಣಿ ಖಾತೆಯನ್ನು ತೆರೆದು ನೇಮಕಾತಿ ಹೊಂದಿದ ದಿನಾಂಕದಿಂದ ಅನ್ವಯವಾಗುವಂತೆ ಮೂಲ ವೇತನಕ್ಕೆ ರಜಾ ವೇತನ ವಂತಿಕೆ ಶೇ.11% ಮತ್ತು ಪಿಂಚಣಿ ನಿಧಿ ಶೇ.12.5% ಹಣವನ್ನು ಜಮಾ ಮಾಡಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಸಲ್ಲಿಸಿದೆ. | |
| ನಿರ್ಣಯ | **ವಿಶ್ವವಿದ್ಯಾಲಯದ ಸಿಬ್ಬಂದಿಗಳ ರಜಾ ವೇತನ ವಂತಿಕೆ ಮತ್ತು ಪಿಂಚಣಿ ನಿಧಿಯನ್ನು ನೇಮಕಾತಿ ಹೊಂದಿದ ದಿನದಿಂದ ಪಾವತಿಸಲು ಸಭೆಯು ಅನುಮೋದನೆಯನ್ನು ನೀಡಿತು.** | |
| ವಿಷಯ 08 | **ಡಾ. ಶ್ರೀನಿವಾಸ ವರಖೇಡಿ –ಇವರ ರಜಾ ವೇತನ ವಂತಿಕೆ ಮತ್ತು ಪಿಂಚಣಿ ನಿಧಿ ಬಗೆಗೆ.**<br>ಡಾ. ಶ್ರೀನಿವಾಸ ವರಖೇಡಿ, ಪ್ರಾಧ್ಯಾಪಕರು, ಶಾಸ್ತ್ರ ನಿಕಾಯ ಇವರು ದಿನಾಂಕ: 13.12.2017 ರಂದು "ಕವಿಕುಲಗುರು ಕಾಳಿದಾಸ ಸಂಸ್ಕೃತ ವಿಶ್ವವಿದ್ಯಾಲಯ, ನಾಗಪುರ, ಮಹಾರಾಷ್ಟ್ರ ರಾಜ್ಯ" ಇಲ್ಲಿಗೆ ಕುಲಪತಿಗಳಾಗಿ ನೇಮಕಗೊಂಡು ಪ್ರತಿನಿಯೋಜನೆ ಮೇಲೆ ಕರ್ತವ್ಯದಿಂದ ಬಿಡುಗಡೆ ಹೊಂದಿರುತ್ತಾರೆ. ಅವರು ಅಲ್ಲಿ ಕರ್ತವ್ಯ ನಿರ್ವಹಿಸುವ ಅವಧಿಯ ಮೂಲ ವೇತನಕ್ಕೆ ರಜಾ ವೇತನ ವಂತಿಕೆ ಶೇ. 11% ಮತ್ತು ಪಿಂಚಣಿ ನಿಧಿ ಶೇ. 12.5% ಹಣವನ್ನು ಪ್ರತಿ ಮಾಸಿಕ ನಮ್ಮ ವಿಶ್ವವಿದ್ಯಾಲಯಕ್ಕೆ ಕಳಿಸಲು ಸಂಬಂಧಪಟ್ಟ ವಿಶ್ವವಿದ್ಯಾಲಯದೊಂದಿಗೆ ಪತ್ರ ವ್ಯವಹಾರ ಮಾಡಲು ವಿತ್ತಾಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಬಹುದಾಗಿದ್ದು ಸಭೆಯ ಅನುಮತಿಗೆ ಸಲ್ಲಿಸಿದೆ. | |
| ನಿರ್ಣಯ | **ಡಾ. ಶ್ರೀನಿವಾಸ ವರಖೇಡಿ ಇವರ ರಜಾ ವೇತನ ವಂತಿಕೆ ಮತ್ತು ಪಿಂಚಣಿ ನಿಧಿಯನ್ನು ಪಾವತಿಸಲು ಸಭೆಯು ಒಪ್ಪಿಗೆ ನೀಡಿತು.** | |

**ಶ್ರೀಮತಿ ಎಂ. ಶಿಲ್ಪ, ಕೆ.ಎ.ಎಸ್.**
ಸದಸ್ಯ ಕಾರ್ಯದರ್ಶಿ

**ಪ್ರೊ. ಪದ್ಮಾಶೇಖರ್**
ಅಧ್ಯಕ್ಷರು